ಕ-72-100

**ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಯು.ಬಿ.ವೆಂಕಟೇಶ್ ರವರು ನಿಯಮ 72 ರಡಿಯಲ್ಲಿ ನೀಡಿರುವ ಸೂಚನಾ ಪತ್ರಕ್ಕೆ ಮಾನ್ಯ ಮುಖ್ಯಮಂತ್ರಿಯವರ ಹೇಳಿಕೆ.**

ಪ್ರಶ್ನೆ:-

ಬೆಂಗಳೂರು ನಗರದ ಚಾಲುಕ್ಯ ವೃತ್ತದಿಂದ ದೇವನಹಳ್ಳಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಯ ಉದ್ದೇಶಿತ ಯೋಜನೆಯ ಕುರಿತು.

ಉತ್ತರ:-

ಬೆಂಗಳೂರು ನಗರದ ಚಾಲುಕ್ಯ ವೃತ್ತದಿಂದ ದೇವನಹಳ್ಳಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಯ ಉದ್ದೇಶಿತ ಯೋಜನೆ ಪ್ರಸ್ತಾವನೆಯು ಸರ್ಕಾರದ ಮುಂದಿರುವುದಿಲ್ಲ.

ಬೆಂಗಳೂರು ನಗರದ ಚಾಲುಕ್ಯ ವೃತ್ತದಿಂದ ಅರಮನೆ ರಸ್ತೆ ಜಂಕ್ಷನ್ (ಬಿ.ಡಿ.ಎ ಮೇಲ್ಸೇತುವೆ) ವರೆಗಿನ ರಸ್ತೆ ಭಾಗದಲ್ಲಿ ಪ್ರಸ್ತುತ ಯಾವುದೇ ಅಭಿವೃದ್ಧಿ ಯೋಜನೆ ಪ್ರಸ್ತಾವನೆ ಇರುವುದಿಲ್ಲ. ಸದರಿ ರಸ್ತೆಯ ಅರಮನೆ ರಸ್ತೆ ಜಂಕ್ಷನ್ ನಿಂದ ಮೇಕ್ರಿ ವೃತ್ತದವರೆಗಿನ ರಸ್ತೆ ಭಾಗವನ್ನು ಅಗಲೀಕರಣಗೊಳಿಸುವ ಯೋಜನೆ ಪ್ರಗತಿಯಲ್ಲಿದ್ದು, ಗುತ್ತಿಗೆದಾರರಿಗೆ ಕಾರ್ಯಾದೇಶ ನೀಡಲಾಗಿದೆ. ಪ್ರಸ್ತುತ ಸದರಿ ಯೋಜನೆ ಅನುಷ್ಠಾನಕ್ಕೆ ಅರಮನೆ ಮೈದಾನದ 64,650 ಚ.ಮೀ. ಜಮೀನು ಅಗತ್ಯವಿದ್ದು, ಸದರಿ ಜಮೀನನ್ನು ಪಡೆದುಕೊಳ್ಳುವ ಕುರಿತು ಮಾನ್ಯ ಸರ್ವೋಚ್ಛ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಲಾಗಿದ್ದು, ಇತ್ಯರ್ಥಗೊಂಡ ನಂತರ ಸದರಿ ಯೋಜನೆಯ ಅನುಷ್ಠಾನಕ್ಕೆ ಕ್ರಮವಹಿಸಲಾಗುವುದು.

ಮೇಕ್ರಿ ವೃತ್ತದಿಂದ ಹೆಬ್ಬಾಳ ಮೇಲ್ಸೇತುವೆವರೆಗಿನ ರಸ್ತೆ ಭಾಗದಲ್ಲಿ ಪ್ರಸ್ತುತ ಯಾವುದೇ ಅಭಿವೃದ್ಧಿ ಯೋಜನೆ ಪ್ರಸ್ತಾವನೆ ಇರುವುದಿಲ್ಲ. ಈ ರಸ್ತೆಯ ಹೆಬ್ಬಾಳ ಮೇಲ್ಸೇತುವೆಯಿಂದ ದೇವನಹಳ್ಳಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದವರೆಗಿನ ಭಾಗ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ವ್ಯಾಪ್ತಿಯಲ್ಲಿದ್ದು, ರಾಜ್ಯ ಸರ್ಕಾರದಿಂದ ಯಾವುದೇ ಯೋಜನೆ ಪ್ರಸ್ತಾವನೆ ಇರುವುದಿಲ್ಲ.

---

**ನಅಇ 239 ಬೆಂಆಸೇ 2021**

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ